# ಮೂರನೇ ಟೈಗರ್!



‘ಟೈಗರ್ ಜಿಂದಾ ಹೈ’ ಚಿತ್ರದ ಬಾಲಿವುಡ್‌ನಲ್ಲಿ ಎಬ್ಬಿಸಿದ ಯಶಸ್ಸಿನ ಅಲೆ ಬಾಲಿವುಡ್‌ನಲ್ಲಿ ಇನ್ನೂ ಹಸಿರಾಗಿದೆ. ಇದೀಗ ಟೈಗರ್ ಸರಣಿಯ ಮೂರನೆ ಚಿತ್ರಕ್ಕೆ ಪೂರ್ವಸಿದ್ಧತೆ ನಡೆದಿದೆ. ಸಲ್ಮಾನ್ ಖಾನ್ ಮತ್ತು ಆದಿತ್ಯ ಚೋಪ್ರಾ ಈ ಹೊಸ ಟೈಗರ್ ಅನ್ನು ಅದ್ದೂರಿಯಾಗಿ ತರಲು ಎಲ್ಲ ಯೋಜನೆಗಳನ್ನೂ ರೂಪಿಸಿದ್ದು 300 ಕೋಟಿ ರೂಪಾಯಿಗಳ ಬಜೆಟ್ ಕೂಡಾ ಸಿದ್ಧವಾಗಿದೆಯಂತೆ. ಬಾಲಿವುಡ್‌ನಲ್ಲಿ ಹಿಂದೆಂದೂ ಇಷ್ಟು ಅದ್ದೂರಿಯ ಚಿತ್ರ ಬಂದಿಲ್ಲ ಎಂದು ಪ್ರೇಕ್ಷಕರು ಆಡಿಕೊಳ್ಳುವಂತೆ ಚಿತ್ರ ತಯಾರಾಗಲಿದೆ ಎನ್ನುವುದು ಯಶ್‌ರಾಜ್ ಫಿಲಂಸ್ ಮೂಲಗಳ ಹೇಳಿಕೆ.

ಚಿತ್ರದ ಶೂಟಿಂಗ್ ಸಲುವಾಗಿಯೇ ಸುಮಾರು ೨೨೫ ಕೋಟಿ ರೂಪಾಯಿ ಖರ್ಚಾಗುವ ನಿರೀಕ್ಷೆ ಇದೆ. ಉಳಿದದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸಕ್ಕೆ. ಈ ಚಿತ್ರದ ನಟನೆಗೆ ಸಲ್ಮಾನ್ ೧೦೦ ಕೋಟಿ ರೂಪಾಯಿ ಸಂಭಾವನೆ ಪಡೆಯಲಿದ್ದಾನೆ ಎಂದು ಬಾಲಿವುಡ್‌ನಲ್ಲಿ ಭರ್ಜರಿ ಸುದ್ದಿ ಹಬ್ಬಿದೆ.

ಟೈಗರ್ ಸರಣಿಯ ಎರಡನೇ ಸಿನಿಮಾ ‘ಟೈಗರ್ ಜಿಂದಾ ಹೈ’ ಬಾಕ್ಸಾಫೀಸ್‌ನಲ್ಲಿ 339 ಕೋಟಿ ರೂಪಾಯಿಗಳನ್ನು ಬಾಚಿಕೊಂಡಿತ್ತು. ಆಗ ಸಲ್ಮಾನ್ ಖಾನ್ ಸಂಭಾವನೆ ಹೊರತು ಪಡಿಸಿ ಚಿತ್ರಕ್ಕೆ 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಮೊದಲ ಚಿತ್ರ ‘ಏಕ್ ಥಾ ಟೈಗರ್’ಗೆ ಸಂಭಾವನೆ ಹೊರತುಪಡಿಸಿ 60 ಕೋಟಿ ರೂಪಾಯಿ ಖರ್ಚು ಮಾಡಲಾಗಿತ್ತು. ಮೂರನೇ ಹಾಗೂ ಕೊನೆಯ ಟೈಗರ್ ಕಂತು ಅದ್ದೂರಿಯಾಗಿರಬೇಕು. ಲಾಭ ನಷ್ಟದ ಲೆಕ್ಕ ನಾವು ಈಗ ನೋಡುವುದಿಲ್ಲ ಎನ್ನುವುದು ಆದಿತ್ಯ ಚೋಪ್ರಾ ಮಾತು.



# ಕಂಗನಾಳ ರಾಮಮಂದಿರ

ಕಂಗನಾ ರನೌತ್ ಮತ್ತೆ ಸುದ್ದಿಯಲ್ಲಿದ್ದಾಳೆ. ಅದಕ್ಕೆ ಕಾರಣ ಆಕೆ ಈಗ ನಿರ್ದೇಶಿಸಲು ಹೊರಟಿರುವ ಹೊಸ ಸಿನಿಮಾ. ‘ನನ್ನ ಹೊಸ ಸಿನಿಮಾದ ಥೀಮ್ ಅಯೋಧ್ಯೆ ಮತ್ತು ರಾಮಮಂದಿರ’ ಎನ್ನುವುದು ಆಕೆ ಸಿಡಿಸಿರುವ ಹೊಸ ಬಾಂಬ್!

‘ಅಯೋಧ್ಯೆ ನನಗೆ ಸಾಂಕೇತಿಕ. ಕಳೆದ 500–600 ವರ್ಷಗಳಿಂದ ರಾಮಮಂದಿರ ಕಟ್ಟಲು ನಾವು ನಡೆಸಿರುವ ಪ್ರಯಾಣ ನಿಜಕ್ಕೂ ರೋಮಾಂಚಕವಾದದ್ದು. ರಾಮಮಂದಿರದ ಇತಿಹಾಸದ ಬಗ್ಗೆಯೇ ನನ್ನ ಸಿನಿಮಾ ಇರಲಿದೆ. ಅದರಲ್ಲಿ ಈಗ ನಡೆದ ಭೂಮಿಪೂಜೆಯೂ ಸೇರಿಕೊಳ್ಳಲಿದೆ’ ಎಂದು ಸಂದರ್ಶನವೊಂದರಲ್ಲಿ ಕಂಗನಾ ಹೇಳಿದ್ದಾಳೆ.

‘ಬಾಬರನ ದಾಳಿಯ ಬಳಿಕ ಒಟ್ಟು 72 ಕದನಗಳು ನಡೆದಿವೆ. ರಾಮಮಂದಿರಕ್ಕಾಗಿ ಹಲವಾರು ಮುಸ್ಲಿಮರೂ ಹೋರಾಟ ನಡೆಸಿದ್ದಾರೆ. ರಾಮರಾಜ್ಯ ಎನ್ನುವುದು ಧರ್ಮಾತೀತವಾದದ್ದು. ಅಪರಾಜಿತ ಅಯೋಧ್ಯ ಅದರ ಬಗ್ಗೆಯೇ ಇರಲಿದೆ. 600 ವರ್ಷಗಳ ಇತಿಹಾಸವನ್ನು ಚಿತ್ರಕಥೆಯಲ್ಲಿ ಒಡಮೂಡಿಸುವುದು ಕಷ್ಟದ ಕೆಲಸ. ವಿಜಯೇಂದ್ರ ಸರ್ ಈ ಕೆಲಸವನ್ನು ಸುಂದರವಾಗಿ ಮಾಡಿದ್ದಾರೆ’ ಎಂದಿರುವ ಕಂಗನಾ, ‘ಬಾಹುಬಲಿ’ಯನ್ನು ನೆನಪಿಸಿಕೊಂಡಿದ್ದಾರೆ.

ಈ ಹಿಂದೆ ‘ಮಣಿಕರ್ಣಿಕಾ...’ ಚಿತ್ರವನ್ನು ಸಹನಿರ್ದೇಶನ ಮಾಡಿರುವ ಅನುಭವ ಕಂಗನಾ ಬೆನ್ನಿಗಿದೆ. ಸದ್ಯಕ್ಕೆ ಈಕೆ ನಟಿಸುತ್ತಿರುವ ಜಯಲಲಿತಾ ಜೀವನಚರಿತ್ರೆ ಆಧಾರಿತ ‘ತಲೈವಿ’ ಚಿತ್ರ ಬಿಡುಗಡೆಯ ನಿರೀಕ್ಷೆಯಲ್ಲಿದ್ದಾಳೆ. ಜೊತೆಗೆ ‘ಧಾಕಡ್’ ಎನ್ನುವ ಆಕ್ಷನ್ ಚಿತ್ರವೊಂದರಲ್ಲೂ ನಟಿಸುತ್ತಿದ್ದಾಳೆ.

■ ಬಿಂದು